# ಬೆಂಕಿಯಲ್ಲಿ ಅರಳಿದ ಹೂವು



■ ಪ್ರವೀಣ ಕುಲಕರ್ಣಿ

ತಮಿಳುನಾಡು ರಾಜ್ಯದ ವೆಲ್ಲೋರ್‌ನ ಪ್ರೇಮಾ ಧನರಾಜ್ ಅವರ ಕುರಿತು ನೀವು ಕೇಳಿಲ್ಲ ಅಲ್ಲವೇ? ಇಡೀ ಸ್ತ್ರೀಸಂಕುಲಕ್ಕೆ ಮಾದರಿಯಾಗಬಲ್ಲ ವ್ಯಕ್ತಿತ್ವ ಅವರದು. ಅವರ ಸಾಹಸಮಯ ಬದುಕಿನ ಕಥೆ ಕೇಳಿದರೆ ನಿಮಗೂ ಹಾಗೇ ಅನಿಸೀತು. ಒಬ್ಬ ವ್ಯಕ್ತಿ ಹೇಗೆ ಸಾರ್ಥಕವಾಗಿ ಜೀವನ ನಡೆಸಬಹುದು ಎಂಬುದಕ್ಕೂ ಮಾದರಿ ಅವರು. ನಮ್ಮೊಳಗಿನ ಛಲ ಹೇಗಿರಬೇಕು, ಗುರಿ ಮುಟ್ಟುವವರೆಗೆ ಅದನ್ನು ಹೇಗೆ ಕಾಪಿಟ್ಟುಕೊಳ್ಳಬೇಕು ಎಂಬುದಕ್ಕೆ ಪ್ರೇಮಾ ಅವರ ಬದುಕಿಗಿಂತ ಬೇರೆ ಉತ್ತಮ ನಿದರ್ಶನ ಎಲ್ಲಿ ಸಿಕ್ಕೀತು?

ಪ್ರೇಮಾ, ತಮ್ಮ ಎಂಟನೇ ವರ್ಷದವರೆಗೆ ಇತರ ಬಾಲಕಿಯರಂತೆ ಖುಷಿಯಿಂದ ಆಡಿಕೊಂಡಿದ್ದರು. ಅದು 1965ರ ಸಂದರ್ಭ. ಅದೊಂದು ದಿನ ಮುಂಜಾನೆ, ಅಡುಗೆಮನೆಯಲ್ಲಿ ಎಂಟು ವರ್ಷದ ಈ ಪೋರಿ ಆಟವಾಡುತ್ತಿದ್ದಾಗ ಸ್ಟೌ ಸ್ಫೋಟಿಸಿ ಮುಖ ಸೇರಿದಂತೆ ಅವಳ ದೇಹದ ಅರ್ಧಭಾಗದವರೆಗೆ ಆಳವಾದ ಸುಟ್ಟ ಗಾಯಗಳಾಗಿದ್ದವು. ಆ ಮಗು ಬದುಕುತ್ತದೆ ಎಂದು ಯಾರೂ ನಿರೀಕ್ಷಿಸಿರಲಿಲ್ಲ. ಅವಳ ಮುಖ ಹಾಗೂ ದೇಹದಲ್ಲಿ ಎಷ್ಟೊಂದು ಆಳವಾದ ಗಾಯಗಳಾಗಿದ್ದವು ಎಂದರೆ ಈ ಹುಡುಗಿ ಯಾರು ಎಂದು ಗುರುತು ಹಿಡಿಯುವುದು ಸಹ ಕಷ್ಟವಾಗಿತ್ತು. ಅರ್ಧಸುಟ್ಟ ದೇಹದ ಬಾಲಕಿಯನ್ನು ಹೊತ್ತು ತಂದೆ–ತಾಯಿಗಳು ವೆಲ್ಲೋರ್‌ನ ಕ್ರಿಶ್ಚಿಯನ್ ಮೆಡಿಕಲ್ ಕಾಲೇಜಿಗೆ ಬಂದರು. ಅಲ್ಲಿನ ವೈದ್ಯ ಎಲ್‌ಬಿಎಂ ಜೋಸೆಫ್ ಅವರು, ‘ಸಾಧ್ಯವಿರುವ ಎಲ್ಲ ಪ್ರಯತ್ನ ಮಾಡೋಣ, ಮಿಕ್ಕಿದ್ದನ್ನು ದೇವರಿಗೆ ಬಿಡೋಣ’ ಎಂದು ಆ ಹುಡುಗಿಗೆ ಚಿಕಿತ್ಸೆ ಆರಂಭಿಸಿದರು. ಅದೃಷ್ಟವಶಾತ್ ಈ ಹುಡುಗಿ ಬದುಕುಳಿದಳು. ಆದರೆ, ಸುದೀರ್ಘ ಅವಧಿಯ ಚಿಕಿತ್ಸೆಯಲ್ಲಿ 14 ದೊಡ್ಡ ಸರ್ಜರಿಗಳನ್ನು ಆಕೆ ಮಾಡಿಸಿಕೊಳ್ಳಬೇಕಾಯಿತು. ಎಲ್ಲ ನೋವನ್ನೂ ತಾಳಿಕೊಳ್ಳಬೇಕಾಯಿತು.

ಬಾಲ್ಯವನ್ನು ಆಸ್ಪತ್ರೆಯಲ್ಲಿಯೇ ಕಳೆದ ಪ್ರೇಮಾ ಅವರಿಗೆ ಆಸ್ಪತ್ರೆ, ಅಲ್ಲಿನ ಗ್ಲುಕೋಸ್ ಬಾಟಲಿಗಳು ತುಂಬಿದ ಕೋಣೆ ಮತ್ತು ‘ಆಯುಧ’ ಹಿಡಿದು ಬರುತ್ತಿದ್ದ ವೈದ್ಯರನ್ನು ಕಂಡರೆ ಹೇವರಿಕೆಯಾಗುತ್ತಿತ್ತು. ‘ಏನೂ ಚಿಂತೆ ಮಾಡಬೇಡ. ಈ ಬೇಸರವೂ ಬೇಡ. ಒಂದುದಿನ ಎಲ್ಲವೂ ಸರಿಹೋಗುತ್ತೆ. ನಿನ್ನ ಚಿಕಿತ್ಸೆಗಾಗಿ ನನಗೆ ಸಹಕಾರ ಕೊಟ್ಟರೆ ನಾನು ನಿನಗೆ ನನ್ನ ಕೂದಲನ್ನು ಕೊಡುತ್ತೇನೆ’ ಎಂದು ಪ್ರೊ. ಜೋಸೆಫ್ ಹುರಿದುಂಬಿಸುತ್ತಿದ್ದರು.

ನಿಧಾನವಾಗಿ, ಆದರೆ ನಿಶ್ಚಿತವಾಗಿ, ಪ್ರೇಮಾ ಚೈತನ್ಯ ಪಡೆಯತೊಡಗಿದರು. ಆರೋಗ್ಯದಲ್ಲೂ ಸುಧಾರಣೆ ಕಂಡುಬರತೊಡಗಿತು. ಯಾವ ಬೆಂಕಿ ಅವರ ಜೀವವನ್ನು ಪಡೆಯಲಿಲ್ಲವೋ ಅಂತಹ ಬೆಂಕಿಯೇ ಅವರನ್ನು ಒಳಗಿನಿಂದ ಮತ್ತಷ್ಟು ಬಲಿಷ್ಠಗೊಳಿಸಿತು. ಸುಟ್ಟ ದೇಹದೊಳಗೆ ಹೊಸದೇನನ್ನೋ ಸಾಧಿಸಬೇಕೆಂಬ ನಂದಾದೀಪವೂ ಹೊತ್ತಿಕೊಂಡಿತು. ವೈದ್ಯಕೀಯದ ಕುರಿತು ಆಸಕ್ತಿ ತಾಳಲು, ಆ ದಾರಿಯಲ್ಲಿ ಮುನ್ನಡೆಯಲು ಅದು ದಾರಿದೀಪವಾಯಿತು. ಹುಬ್ಬಳ್ಳಿಯ ಕಿಮ್ಸ್‌ನಲ್ಲಿ ಪ್ರೇಮಾ ಎಂಬಿಬಿಎಸ್ ಓದಿದರು. ವೃತ್ತಿಯಲ್ಲಿ ಪಾರಮ್ಯವನ್ನೂ ಮೆರೆದರು. ಇನ್ನೂ ವಿಶೇಷವಾದ ಸಂಗತಿಯನ್ನು ನಿಮಗೆ ಹೇಳಬೇಕೇ? ಯಾವ ವೈದ್ಯಕೀಯ ಸಂಸ್ಥೆಯಲ್ಲಿ ಜೀವನ್ಮರಣದ ಶಯ್ಯೆಯಲ್ಲಿ ಬಾಲ್ಯವನ್ನು ಆಕೆ ಕಳೆದಿದ್ದರೋ, ಅದೇ ಸಂಸ್ಥೆಯಲ್ಲಿ ಪ್ಲಾಸ್ಟಿಕ್ ಸರ್ಜನ್ ರೆಸಿಡೆಂಟ್ ಆಗಿ ಬಂದರು! ಮತ್ತೆ ಅವರ ಮಾರ್ಗದರ್ಶಕ ಯಾರು ಆಗಿರಬಹುದು? ನಿಮ್ಮ ಊಹೆ ನಿಜ. ಪ್ರೊ. ಜೋಸೆಫ್ ಅವರೇ ಅವರ ಮಾರ್ಗದರ್ಶಕ ಆಗಿದ್ದರು. ಒಂದೇ ವ್ಯತ್ಯಾಸವೆಂದರೆ, ಜೋಸೆಫ್ ಅವರು ಪ್ರೇಮಾ ಅವರಿಗೆ ಕೂದಲು ಕಾಣಿಕೆಯಾಗಿ ಭರವಸೆ ನೀಡಿದ್ದರಲ್ಲ? ಆದರೆ, ಅವರ ತಲೆಯಲ್ಲಿ ಈಗ ಕೂದಲೇ ಇರಲಿಲ್ಲ. ‘ಪುಟ್ಟ ಬಾಲಕಿಯಲ್ಲಿ ಆತ್ಮವಿಶ್ವಾಸ ಮೂಡಿಸಲು ಒಂದು ಹಸಿ ಸುಳ್ಳು ಹೇಳಿದ್ದೆ ಅಷ್ಟೇ’ ಎಂದು ನಗುತ್ತಾರೆ ಜೋಸೆಫ್. ಈ ಕಥೆಯನ್ನು ಡಾ. ಕಾರ್ತಿಕ್ ಟ್ವಿಟರ್‌ನಲ್ಲಿ ಬಿಚ್ಚಿಡುತ್ತಾರೆ.

ಪ್ಲಾಸ್ಟಿಕ್ ಸರ್ಜನ್ ಆಗಿ ಬ್ಯುಸಿ ಆಗಿರುವ ಪ್ರೇಮಾ ಅವರಿಗೆ ಮದುವೆಯಾಗಲೇ ಪುರುಸೊತ್ತು ಸಿಗಲಿಲ್ಲ. ಸುಟ್ಟ ಗಾಯಗಳನ್ನು ಮಾಡಿಕೊಂಡು ಬಂದವರ ಬದುಕಿಗೊಂದು ಹೊಸ ರೂಪ ನೀಡುವುದರಲ್ಲೇ ಅವರ ಆಯುಷ್ಯದ ದಿನಗಳು ಕಳೆದವು. ವೆಲ್ಲೋರ್ ವೈದ್ಯಕೀಯ ಸಂಸ್ಥೆಯ ಪ್ಲಾಸ್ಟಿಕ್ ಸರ್ಜರಿ ವಿಭಾಗದ ಮುಖ್ಯಸ್ಥರಾಗಿಯೂ ಅವರು ನಿಯುಕ್ತಿಗೊಂಡರು. ಬೆಂಕಿಗೆ ಬಿದ್ದ ದೇಹಗಳನ್ನು ಸಾವಿನ ದವಡೆಯಿಂದ ಹೊರಗೆ ಎಳೆಯುವುದು, ಅವುಗಳಲ್ಲಿ ಮತ್ತೆ ಜೀವನ್ಮುಖಿ ಚೈತನ್ಯವನ್ನು ತುಂಬುವುದು ಸುಲಭದ ಕೆಲಸವಲ್ಲ. ಆದರೆ, ಆ ಕೆಲಸವನ್ನು ಪ್ರೇಮಾ ಅತ್ಯಂತ ಪ್ರೀತಿಯಿಂದ ಮಾಡಿದರು.

ಟೆಕ್ಸಾಸ್ ವಿಶ್ವವಿದ್ಯಾಲಯದ ಸಂದರ್ಶಕ ಪ್ರಾಧ್ಯಾಪಕಿಯಾಗಿರುವ ಪ್ರೇಮಾ, ನಿವೃತ್ತಿಯ ನಂತರವೂ ವೃತ್ತಿಯ ಪ್ರೀತಿಯನ್ನು ಬಿಟ್ಟುಕೊಟ್ಟವರಲ್ಲ. ‘ಅಗ್ನಿರಕ್ಷಾ’ ಎಂಬ ಲಾಭಾಪೇಕ್ಷೆ ರಹಿತವಾದ ವೈದ್ಯಕೀಯ ಸಂಸ್ಥೆಯನ್ನು ಕಟ್ಟಿರುವ ಅವರು, ಸುಟ್ಟ ಗಾಯಾಳುಗಳ ಪರಿಪೂರ್ಣ ಆರೈಕೆಗೆ ವ್ಯವಸ್ಥೆ ಮಾಡಿದ್ದಾರೆ. ಸುಟ್ಟ ಬದುಕಿನಿಂದ ಕಂಗೆಟ್ಟ ಬಡವರ ಮನೆಗಳಲ್ಲಿ ಹೊಸ ನಂದಾದೀಪ ಬೆಳಗಲು ಕಾರಣರಾಗಿದ್ದಾರೆ. ಯಾವ ಬೆಂಕಿಯೂ ನಮ್ಮೊಳಗಿನ ಬೆಂಕಿಯಷ್ಟು ಶಕ್ತಿಶಾಲಿ ಅಲ್ಲ ಎಂದು ತೋರಿಸಿಕೊಟ್ಟ ಸಾಧಕಿ ಅವರಾಗಿದ್ದಾರೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65